<u>ದಿನಾಂಕಃ **28-03-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಮುಂದುವರಿದ ಮುಖ್ಯವಿಚಾರಣೆಃ ವಾದಿ ಪರ ಶ್ರೀ ಕೆ ಆರ್ ಎಸ್ ವಕೀಲರಿಂದಃ</u>

ನಾನು ಈ ದಿನ ನನ್ನ ತಂದೆ, ತಾಯಿ ಹಾಗೂ ನನ್ನ ಇಬ್ಬರು ತಮ್ಮಂದಿರ ಮರಣ ಪ್ರಮಾಣ ಪತ್ರಗಳ ದೃಢಿಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ- 18 ರಿಂದ 21 ಎಂದು, ಎಂ.ಆರ್.ಸಂಖ್ಯೆ 36/2004-05 ಇದರ ಮ್ಯುಟೇಷನ್ ನ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 22 ಎಂದು, ಮೂಲ ದಾವೆ ಸಂಖ್ಯೆ 2/2021 ಇದರ ವಾದ ಪತ್ರ, ಮಧ್ಯಂತರ ಅರ್ಜಿ - 1 ಮತ್ತು 2, ಆಕ್ಷೇಪಣೆಯ ದೃಢಿಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ- 23 ರಿಂದ 27 ಎಂದು, ಮೂಲ ದಾವೆ ಸಂಖೆ 2/2021 ರ ಮಧ್ಯಂತರ ಅರ್ಜಿ 1 ಮತ್ತು 2 ರ ಆದೇಶದ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 28 ಎಂದು ಗುರುತಿಸಲಾಯಿತು.
ಆದುದರಿಂದ ದಾವೆಯಲ್ಲಿ ಕೋರಿದ ಪರಿಹಾರವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರ ಸಮಯ ಕೋರಿದ್ದ,ಸಮಯ ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ
ನ.ರಾ.ಪುರ, ಸಂಚಾರಿ ನ್ಯಾಯಾಲಯ,
ಕೊಪ್ಪ.

ಸಾಕ್ಷಿದಾರರ ಸಹಿಃ